ಮಾಸಿಕ ಪತ್ರಿಕೆ

Email ID: arivinaaramane@gmail.com

# ಅರಿವಿನ ಅರಮನೆ

## ಆಶ್ರಯ ಸಂಸ್ಥೆಯ ಜ್ಞಾನ ಅಂಗಳ

www.ashraya-usa.org

ಡಿಸೆಂಬರ್ -2015

ಖಾಸಗಿ ಪ್ರಸಾರಕ್ಕಾಗಿ

ASHRAYA

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಹನೂರು ಶೈಕ್ಷಣಿಕ ವಲಯದ ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲಾ ಮಕ್ಕಳ ಆಶಾಕಿರಣ ಅರಿವಿನ ಅರಮನೆ ಗ್ರಂಥಾಲಯ. ಹೆಸರಿನಂತೆ ಅರಿವಿನ ಕಣಜವು ಈ ಅರಿವಿನ ಅರಮನೆ ಗ್ರಂಥಾಲಯ. 'ಭಾರತದಲ್ಲಿನ ಗ್ರಾಮೀಣ ಮತ್ತು ವಿಕಲಚೇತನ ವಿದ್ಯಾರ್ಥಿಗಳಿಗೆ ನೆರವು' ನೀಡುತ್ತಿರುವ ಬೆಂಗಳೂರಿನ ಸರ್ಕಾರೇತರ ಸಂಸ್ಥೆ, ಆಶ್ರಯ ಫೌಂಡೇಶನ್. ಇದರ ಅಧ್ಯಕ್ಷರಾದ ವಾಸುಕಿ ಸುಬ್ಬರಾವ್‌ರವರು ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಸಂಸ್ಥೆಯು ಯಾವುದೇ ಫಲಾಪೇಕ್ಷೆಯಿಲ್ಲದೆ ಅಂಥ ಮಕ್ಕಳ ಹಾಗೂ ಅಶಕ್ತ ಮಕ್ಕಳ ಕಲಿಕೆಗೆ ಹೆಚ್ಚು ನೀಡುತ್ತಾ ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತಿದೆ. ತದನಂತರ ಹನೂರು ವಲಯ ಕಣ್ಣೂರಿನ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಥಮವಾಗಿ ಸಂತಸ ಕಲಿಕೆಯ ವಿಜ್ಞಾನ ಪ್ರಾಜೆಕ್ಟ್‌ಗಳನ್ನು ಪ್ರಾರಂಭಿಸಿತು.



ಆಶ್ರಯ ಸಂಸ್ಥೆಯು ಮಕ್ಕಳ ಕಲಿಕೆಯನ್ನು ಬಲವರ್ಧನೆ ಗೊಳಿಸಲು ಪ್ರಾಯೋಗಿಕ ಚಟುವಟಿಕೆಗಳನ್ನು ಕೈಗೊಂಡು ಮಕ್ಕಳ ವಿಜ್ಞಾನದಲ್ಲಿ ಆಸಕ್ತಿಯನ್ನು ಹೆಚ್ಚಿಸುತ್ತಿದೆ ಎಂದು ನಿಯೋಜಿತ ವಿಜ್ಞಾನ ಶಿಕ್ಷಕಿ ಸರಸ್ವತಿ ತಿಳಿಸಿದರು.

## ಜ್ಞಾನ ಭಿತ್ತನೆ ಕೇಂದ್ರ

2008ರಲ್ಲಿ ಪ್ರಾಯೋಗಿಕವಾಗಿ ಈ ಎಲ್ಲಾ ಕಾರ್ಯಚಟುವಟಿಕಗಳನ್ನು ಹನೂರು ಶೈಕ್ಷಣಿಕ ವಲಯದ ಹಿ.ಸ.ಪ್ರಾ.ಶಾಲೆ ಕಣ್ಣೂರು ಶಾಲೆಯಲ್ಲಿ ಆಯೋಜಿಸಿ ಯಶಸ್ವಿಗೊಳಿಸಿದ ನಂತರ, 15–09–2012 ರಂದು 5 ಶಾಲೆಗಳಲ್ಲಿ ಪ್ರಾರಂಭವಾಯಿತು. 2014–15ನೇ ವರ್ಷದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ವೈ.ಕೆ. ತಿಮ್ಮೇಗೌಡರವರು ಹಾಗೂ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಯಾದ ಆನಂದ್‌ರವರು 3 ಶಾಲೆಗಳನ್ನು ಉದ್ಘಾಟಿಸಿದರು. ಪ್ರಸ್ತುತ ಒಟ್ಟು 9 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಾದ ಕಣ್ಣೂರು, ಮಂಗಲ, ಹನೂರು, ಲೊಕ್ಕನಹಳ್ಳಿ, ರಾಮಾಪುರ, ಕೆಂಪಯ್ಯನಹಟ್ಟಿ, ಬಸಪ್ಪನದೊಡ್ಡಿ, ಬಂಡಳ್ಳಿ, ಮಣಗಳ್ಳಿಯಲ್ಲಿ ಗ್ರಂಥಾಲಯ ಉತ್ತಮವಾಗಿ ನಡೆಯುತ್ತಿದೆ. ಈ ಶಾಲೆಗಳಿಗೆ 500ಕ್ಕೂ ಹೆಚ್ಚು ಪುಸ್ತಕಗಳು, ರ್‍ಯಾಕ್ಸ್, ಪೀಠೋಪಕರಣಗಳನ್ನು ಸಂಸ್ಥೆ ಒದಗಿಸಿದೆ. ಶಿಕ್ಷಕರ ಜ್ಞಾನ ವೃದ್ಧಿಗಾಗಿ ಪ್ರತ್ಯೇಕ ರ್‍ಯಾಕ್ಸ್‌ನಲ್ಲಿ ಪುಸ್ತಕಗಳು. ಮಕ್ಕಳ ಮನೋರಂಜನೆ ಹಾಗೂ ಬೌದ್ಧಿಕ ಬೆಳವಣಿಗೆಗಾಗಿ ವಿವಿಧ ಬಗೆಯ ಬೋರ್ಡ್ ಗೇಮ್‌ಎಲ್ಲಾ ಶಾಲೆಗಳಿಗೂ ಸಾಮಾನ್ಯ ಜ್ಞಾನ ಸ್ಥಳೀಯ ಸುದ್ದಿಗಳ ಅರಿವಿಗಾಗಿ ದಿನಪತ್ರಿಕೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಪ್ರತಿ ತಿಂಗಳು ದಾಖಲಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಆಯಾಯ ಶಾಲಾ ಮುಖ್ಯಶಿಕ್ಷಕರುಗಳಿಗೆ ನೀಡಲಾಗುತ್ತಿದೆ.



**ವಾಸುಕಿ ಸುಬ್ಬರಾವ್, ಅಧ್ಯಕ್ಷರು.**
**ಆಶ್ರಯ ಫೌಂಡೇಷನ್**

ವೈಜ್ಞಾನಿಕ ಮನೋಭಾವವನ್ನು ಬೆಳೆಸಿ ಕಲಿಕೆಯನ್ನು ಬಲವರ್ಧನೆಗೊಳಿಸಲು ನಮ್ಮ ಆಶ್ರಯ ಫೌಂಡೇಷನ್ ಪ್ರಾಯೋಗಿಕ ಚಟುವಟಿಕೆಗಳನ್ನು ಕೈಗೊಂಡು ಮಕ್ಕಳ ವಿಜ್ಞಾನಾಸಕ್ತಿಯನ್ನು ಹೆಚ್ಚಿಸುತ್ತಿದೆ. ಅಲ್ಲದೇ ಕಲಿಕಾ ಮೌಲ್ಯಮಾಪನವನ್ನು ಕೈಗೊಂಡು ಶೈಕ್ಷಣಿಕ ಸಾಧನೆಗಳ ಗುಣಮಟ್ಟವನ್ನು ಪರೀಕ್ಷೆ ಮಾಡಲಾಗುತ್ತಿದೆ. 'ಅರಿವಿನ ಅರಮನೆ' ಗ್ರಂಥಾಲಯದ ಮೂಲಕ ಓದುವ ಆಸಕ್ತಿ ಹೆಚ್ಚಿಸುವುದು ಈ ಸಂಸ್ಥೆಯ ಮುಖ್ಯ ಧ್ಯೇಯವಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರಾದ ವಾಸುಕಿ ಸುಬ್ಬರಾವ್ ತಿಳಿಸಿದರು.



ಹನೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಅರಿವಿನ ಅರಮನೆ ಗ್ರಂಥಾಲಯದ ಒಳನೋಟ.



ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲೂ ಮಕ್ಕಳು ಹೆಚ್ಚು ಆಸಕ್ತಿವಹಿಸಲೆಂದು ಆಶ್ರಯ ಸಂಸ್ಥೆಯು ಮಕ್ಕಳಿಗೆ ಚಿತ್ರಕಲಾ ತರಬೇತಿ ನೀಡಿ ಮಕ್ಕಳಲ್ಲಿರುವ ಕೌಶಲಗಳನ್ನು ಪತ್ತೆಹಚ್ಚಿ ಉತ್ತೇಜನವನ್ನು ಸಂಸ್ಥೆ ಶ್ರಮಿಸುತ್ತಿದೆ ಎಂದು ನಿಯೋಜಿತ ಚಿತ್ರಕಲಾ ಶಿಕ್ಷಕ ಸಿದ್ದು ತಿಳಿಸಿದರು.



ಮಂಗಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗ್ರಂಥಪಾಲಕಿ ಅಂಜಿಲಿ ಮಕ್ಕಳಿಗೆ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ ಮಕ್ಕಳ ಜ್ಞಾನ ಬತ್ತಳಿಕೆಯನ್ನು ಹೆಚ್ಚಿಸಲು ಆಶ್ರಯ ಫೌಂಡೇಷನ್ ಕೊಡುಗೆ ಶ್ಲಾಘನೀಯ ಎಂದರು.